‘ವಿದ್ಯಾರ್ಥಿಗಳು ಪ್ರತಿವರ್ಷ ಪಾಸಾಗಿ ಮುಂದಿನ ತರಗತಿಗೆ ಹೋಗುತ್ತಾರೆ; ಆದರೆ ಟೀಚರ್ ಅಲ್ಲೇ ಉಳಿದುಕೊಳ್ಳುತ್ತಾರೆ’ ಎಂಬ ಮಾತು ತುಸು ಲಘುವಾಗಿ ಕೇಳಿಸಿದರೂ ಶಿಕ್ಷಕ ವೃತ್ತಿಯ ಘನವಾದ ಮುಖವೊಂದನ್ನೂ ಸೂಚಿಸುತ್ತದೆ. ಶಿಕ್ಷಕ ವೃತ್ತಿಯೆನ್ನುವುದು, ಎಲ್ಲಿಂದಲೋ ಹಾರಿ ಬಂದು ಗೂಡು ಕಟ್ಟಿಕೊಂಡು ಮರಿ ಮಾಡಿ ಮತ್ತೆ ಹಾರಿ ಹೋಗುವ ಹಕ್ಕಿಗಳಿಗೆ ತಾವು ಕೊಟ್ಟು, ಹಣ್ಣು ಕೊಟ್ಟು, ಮಡಿಲಲ್ಲಿರಿಸಿಕೊಂಡು, ಹರಸಿ ಹಾರೈಸಿ ಮುಂದಕ್ಕೆ ಹಾರಲು ಬಿಡುವ ಮರದ ಹಾಗೆ. ಅಸಂಖ್ಯ ಹಕ್ಕಿಗಳ ರೆಕ್ಕೆಗಳಿಗೆ ಕಸುವು ತುಂಬಿ ಹಾರಲು ಆಕಾಶವನ್ನು ಬಿಟ್ಟುಕೊಡುವ ಮರ ಮಾತ್ರ ನಿಂತಲ್ಲೇ ನಿಂತಿರುತ್ತದೆ; ಆಳಕ್ಕೆ ಬೇರು ಬಿಡುತ್ತ, ಆಕಾಶಕ್ಕೆ ಮುಖ ಮಾಡುತ್ತ... ಮುದ್ದು ಮುಗ್ಧ ಮುದ್ದೆಯಂತಿರುವ ಮಕ್ಕಳನ್ನು ಹದಗೊಳಿಸಿ, ವ್ಯಕ್ತಿತ್ವವನ್ನು ಕಟ್ಟಿ ಸಮಾಜದೊಳಗೆ ಕಳುಹಿಸಿಕೊಡುವ ಗುರುಗಳು, ಮಕ್ಕಳಿಂದ ಕಲಿಯುವುದೂ ಸಾಕಷ್ಟಿರುತ್ತದೆ. ಕ್ಲಾಸ್ ರೂಮ್‌ನೊಳಗೆ, ಅವವೇ ಪಠ್ಯಗಳ ಅನುರಣನದ ನಡುವೆ ಥಟ್ಟನೆ ಮನಸ್ಸಿನ ಖುಷಿಕೊಡುವ, ಸಾರ್ಥಕತೆಯ ಭಾವ ಹುಟ್ಟಿಸುವ ಘಟನೆಗಳನ್ನು ಅವರು ಹಾದು ಬರಬೇಕಾಗುತ್ತದೆ. ಸೆಪ್ಟೆಂಬರ್ 5 ಶಿಕ್ಷಕರ ದಿನಾಚರಣೆ. ಆ ನಿಮಿತ್ತ ಕರ್ನಾಟಕದ ಬೇರೆ ಬೇರೆ ಭಾಗದಲ್ಲಿ ಮಕ್ಕಳ ವ್ಯಕ್ತಿತ್ವ ರೂಪಿಸುತ್ತಿರುವ, ಆ ಮೂಲಕ ನಮ್ಮ ನಾಳೆಗಳನ್ನು ನಿರ್ಮಿಸುತ್ತಿರುವ ಗುರುಗಳ ಅಂತರಂಗದ ಮಾತುಗಳನ್ನು ಕೇಳಿಸಿಕೊಳ್ಳುವ ಪ್ರಯತ್ನವನ್ನು ‘ಸುಧಾ’ ಮಾಡಿದೆ. ಈ ಅನುಭವ ಕಥನಗಳು ಶಿಕ್ಷಕ ವೃತ್ತಿ ಯಾಕೆ ಅಮೂಲ್ಯ ಎನ್ನುವುದನ್ನು ಹೇಳುವಂತಿವೆ.

